doc-402
T.P-2

R No KRNN 12

18-11-197

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★★★★★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily

Mysore 4

- For Influential Publicity -

ಪ್ರಕಾಶಕರು: ಅರಮನೆ ಶಿರಸ್ತೇದಾರ್ ಎಂ. ವಿ. ಕುಪ್ಪುರಾವ್ ಸಂಪಾದಕರು: ಧರ್ಮಸ್ಥ ಚಾರುವಿರಚ ಎಂ. ಎಸ್. ಕೃಷ್ಣರಾವ್ (3 ಪು.ಕ

77 ರಲಿ ಕಾಳೀನದಿ ಯೋಜನೆಯ ಮುಕಾಯ

ನಂ ಜ 7. 28 – ಇಎಸ್ಟಿ. ರೇಷನ್ಸ್ – ಟಿಡಿಆರ್ / 74 – 75

ವಿಭಾಗ ಅರಣ್ಯ ಕಚೇರಿ, ಮೈಸೂರು ವಿಭಾಗ,

ಮೈಸೂರು, ತಾರೀಖು 2-11-1974

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವಿಷಯ: 1975 ನೇ ಕ್ಯಾಲೆಂಡರ್ ವರ್ಷಕ್ಕೆ ಇಳಾಖೆಯ ಆನೆಗಳಿಗೆ ಪಡಿತರಗಳನ್ನು ಸರಬರಾಜು ಮಾಡುವುದಕ್ಕೆ ಟೆಂಡರ್ (ಮೈಸೂರು ಅರಣ್ಯ ವಿಭಾಗದ ಕಾಕನಕೋಟೆ ಮತ್ತು ಬೇಗೂರು ಈ ಎರಡು ರೇಂಜ್‌ಗಳಲ್ಲಿರುವ ಆನೆಗಳಿಗೆ)

ಈ ಮೂಲಕ ಸಾರ್ವಜನಿಕರ ಸಾರ್ವತ್ರಿಕ ತಿಳಿವಳಿಕೆಗಾಗಿ ಪ್ರಕಟಪಡಿಸುವುದೇನೆಂದರೆ, ಮೈಸೂರ –1 ರಲ್ಲಿರುವ, ದಿವಾನ್ಸ್ ರಸ್ತೆಯ, ನಂ 316 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರಿಂದ, 1975 ನೇ ಕ್ಯಾಲೆಂಡರ್ ವರ್ಷಕ್ಕೆ ಅಥವಾ ಹೊಸ ಟೆಂಡರ್‌ಗಳು ಕರೆಯಲ್ಪಡುವ ವರೆಗೆ, ಯಾವುದು ತಡವೋ ಅಂಥಹ ವೇಳೆವರಾದ ಟೆಂಡರ್‌ಗಳನ್ನು ವಿಧಾಯಕವಾದ ಫಾರಂಗಳಲ್ಲಿ ಇಳಾಖೆಯ ಆನೆಗಳಿಗೆ (ಕಾಕನಕೋಟೆ ಮತ್ತು ಬೇಗೂರು ಈ ಎರಡು ರೇಂಜ್‌ಗಳಿಗೂ) ಪಡಿತರಗಳನ್ನು ಸರಬರಾಜು ಮಾಡಲು ಸ್ವೀಕರಿಸಲಾಗುವುದು. ಮೈಸೂರು–1 ರಲ್ಲಿರುವ ದಿವಾನ್ಸ್ ರಸ್ತೆಯ ನಂ 316 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರು ಅಥವಾ ಈ ಉದ್ದೇಶಕ್ಕಾಗಿ ಅವರಿಂದ ಅಧಿಕಾರ ಪಡೆದ ಮತ್ತೊಬ್ಬರೇ ಅಧಿಕಾರಿಯವರಿಗೆ 30 ನೇ ನವೆಂಬರ್ 1974 ರಂದು ಮಧ್ಯಾಹ್ನ 4 ಗಂಟೆ ವರೆಗೆ ಅವನ್ನು ಸ್ವೀಕರಿಸುವರು. ನಿಗದಿ ಆದ ತಾರೀಖು ಸಾರ್ವತ್ರಿಕ ರಜಾ ದಿನವೆಂದು ಘೋಷಿತವಾಗಿದ್ದರೆ, ಟೆಂಡರ್ ಮುಂದಿನ ಕೆಲಸದ ದಿನದಲ್ಲಿ ಸ್ವೀಕರಿಸಲ್ಪಡುವುದು. ಮೈಸೂರಿನಲ್ಲಿರುವ ವಿಭಾಗ ಅರಣ್ಯ ಕಚೇರಿಯಲ್ಲಿ ವಿಧಾಯಕವಾದ ಟೆಂಡರ್ ಫಾರಂಗಳನ್ನು ರೂ 5 (ರೂ. ಐದು) ಪ್ಲಸ್ ಚಾರಿಯಲ್ಲಿರುವ ವಾಸ್ತವಿಕ ಮೊಬಲಗಿನ ತೆರಿಗೆ ಪ್ರತಿಯೊಂದಕ್ಕೆ ಪಾವತಿ ಮಾಡಿ 29 ನೇ ನವೆಂಬರ್ 1974 ರ ಸಂಜೆ 5–30 ಗಂಟೆ ವರೆಗೆ ಪಡೆಯಬಹುದು. ಈ ಹಣವನ್ನು ವಾಪಸು ಮಾಡುವುದಿಲ್ಲ

ಟೆಂಡರ್‌ನ ಷರತ್ತಿನ ಹೆಚ್ಚು ವಿವರಗಳನ್ನು ಮೈಸೂರಿನಲ್ಲಿರುವ, ಮೈಸೂರು ವಿಭಾಗದ, ವಿಭಾಗದ ಅರಣ್ಯ ಕಚೇರಿಯಲ್ಲಿ ಕೆಲಸದ ಯಾವುದೇ ದಿನದಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ತಿಳಿಯಬಹುದು.

ಸಹಿ/– ಈರಪ್ಪ,
ವಿಭಾಗ ಅರಣ್ಯ ಅಧಿಕಾರಿಯವರು, ಮೈಸೂರು.

ಬಡಜನತೆಗೆ ನಿವೇಶನ ಹಂಚಿಕೆ

ಮೈಸೂರು - ಕುರುಬಾರಹಳ್ಳಿಯಲ್ಲಿ ತಾ|| 18 ರಂದು 76 ನಿವೇಶನಗಳನ್ನು ಕಾರ್ಮಿಕ ಮಂತ್ರಿ ಶ್ರೀ ಕೆ ಶಿವರಾಮಯ್ಯನವರು ಬಡಜನರಿಗೆ ವಿತರಣೆ ಮಾಡುತ್ತಾ, ಮೈಸೂರು ನಗರಸಭೆ ನಡೆಯಿಂದ ಹಂಚಿರುವ ಈ ನಿವೇಶನಗಳನ್ನು ಪೂರ್ಣ ಅರಿವಿನಿಂದ ಮುಂದಿನ ಹಲವಾರು ಪೀಳಿಗೆಗಳವರೆಗೆ ಹರಭಾರಿ ಮಾಡದೇ ಉಳಿಸಿಕೊಂಡು

ಹಿಂದಿನ ಪುಟ ನೋಡಿ

ಬೀಡಾರು ಶಾಸನಸಭೆ ಸಪ್ಲೆಂಡ್‌ಗೆ

ಪಾಟ್ನಾ — ಈಗಿನ ಚಳುವಳಿ ನಿಲ್ಲಿಸಲು, ಶಾಸನ ಸಭೆಯನ್ನು ಸ್ವಲ್ಪ ಕಾಲ ಸಸ್ಪೆಂಡು ಮಾಡಬೇಕೆಂಬ ಷರತ್ತು ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರಿಂದ ಬಂದರೆ, ಕಾಂಗ್ರೆಸ್ಸು ಸರ್ಕಾರ ಬೀಳಿಸುವುದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಬೂಜಿ ಪತ್ರಿಕೆಯವರಿಗೆ ತಿಳಿಸಿದಂತೆ – ಅಂತಹ ಕೇಳಿಕೆ ಯಾರಿಂದಲೂ ಬಂದಿಲ್ಲ ವೆಂದೂ ಹೇಳಿದರು.

★

ಹಳೇ ಕಾಂಗ್ರೆಸ್‌ನಿಂದ ಅಖಿ ಕಾಂಗ್ರೆಸ್‌ಗೆ

ಪಾಟ್ನಾ — 12 ಮಂದಿ ಹಳೇ ಕಾಂಗ್ರೆಸ್ ಶಾಸಕರು ಅಡಳಿತ ಪಕ್ಷ ಸೇರಿದರು; ಆದರೆ ಇನಳು ಹಳೇ ಕಾಂಗ್ರೆಸ್ಸಿನಿಂದ ಕಳೆದ ತಿಂಗಳು ಹೊರಹೋಡಲ್ಪಟ್ಟವರು – 3 ಮಂದಿ ಜನಸಂಘದವರೂ ಕಾಂಗ್ರೆಸ್ಸಿಗೆ ಸೇರಲಿರುವರೆನ್ನಲಾಗಿದೆ

★

ಹರತಾಳ

ಬಿಜಾಪುರ– ಈಚೆಗೆ ಪಾಟ್ನಾದಲ್ಲಿ ಶ್ರೀ ಜಯಪ್ರಕಾಶ ನಾರಾಯಣರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದ್ದನ್ನು ಪ್ರತಿಭಟಿಸಿ ಇಲ್ಲಿಯ ತೇಖಿನ ಪಾಮುಸ್ಲಿಂ ವ್ಯಾಪಾರಿಗಳ ಸಂಘದ 50 ಅಂಗಡಿಗಳು ಮೊನ್ನೆ ಹರತಾಳ ಆಚರಿಸಿದರು.

★

ಬೊಂಬ್ಯಾ ರೇಸಿಸ್ – ಬೆಂಗಳೂರಲ್ಲಿ ಬಾಜಿ

ಬೆಂಗಳೂರು— ಬೊಂಬಾಯಿನಲ್ಲಿಯ ಘಾಸಲಾಶಾರದ ರೇಸಿಸ್ ಸಂಬಂಧವಾಗಿ ಇಲ್ಲಿ ರೇಸ್‌ಕೋರ್ಸ್‌ಗೆ 3:00 ಆಗಮಿಸಿ ವಿಜಯಿ ಕುದುರೆಗಳಿನ್ನುಕೊಳ್ಳುತ್ತಾ 27 ಬುಕ್‌ಮೇಕರರುಗಳಲ್ಲಿ ರೂ. 657600 ಬಾಜಿ ಕಟ್ಟಿದ್ದರು.

ಕಾಳೀನದಿ ಪ್ರಾಜೆಕ್ಟ್

ಬೆಂಗಳೂರು– ದೈತ್ಯಾಕಾರ ಕಾಳೀನದಿ ಜಲವಿದ್ಯುತ್ ಪ್ರಾಜೆಕ್ಟಿಗೆ ದೊರಕಿಸುವ ಆರ್ಥಿಕ ನೆರವಿನ ಬಗ್ಗೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಪ್ರಸ್ತುತ ಚರ್ಚೆಗಳಿದ್ದರೂ ಆಹರ ಪ್ರಥಮ ಹಂತದ ಪ್ರಥಮ ಘಟ್ಟವು 1977 ರಲ್ಲಿ ಮುಗಿಯುವ ಭರವಸೆ ಇದೆ ಎಂದು ಹೇಳಲಾಗಿದೆ.

★

ಜ್ಯೋತಿಷಿ ಪ್ರತಿಭಟನಾ ಉಪವಾಸ

ಖ್ಯಾತ ಜ್ಯೋತಿಷಿ ಶ್ರೀ ಚಂದ್ರಶೇಖರ ವಿಜಯೋಜಿಯವರು, ಶ್ರೀ ವರ್ಧಮಾನರ 2500 ನಿರ್ವಾಣ ಮಹೋತ್ಸವ ಸಂಬಂಧದಲ್ಲಿ ಸರ್ಕಾರದ ಜೈವಾಡ ಆಚಾರವಿಸಿ ಇದು ರಾಷ್ಟ್ರೀಯ ಮಟ್ಟದಲ್ಲಿ ಜೈನ ಆಚಾರ್ಯರ ನಾಯಕತ್ವದಲ್ಲಿ ಧಾರ್ಮಿಕ ಆಧಾರದ ಮೇಲೆ ನಡೆಯಬೇಕೆಂದು ಹೇಳಿ ಇಂದಿನಿಂದ ಆಹಮದಾಬಾದಿನಲ್ಲಿ ಅನಿರ್ದಿಷ್ಟ ಕಾಲ ಉಪವಾಸ ಕೈಕೊಳ್ಳಲಿರುವರೆನ್ನಲಾಗಿದೆ; ಅವರ ಜೊತೆ 50 ಮಂದಿ ಸ್ತ್ರೀಯರೂ ಪುರುಷರೂ ಒಂದು ದಿನದ ಸಾಂಕೇತಿಕ ಉಪವಾಸ ಕೈಕೊಳ್ಳುವರು.

★

ಎಂ ಐ ಎಸ್ ಎ ಬಗ್ಗೆ ಅಧ್ಯಕ್ಷರ ಆಜ್ಞೆ

ನವದೆಹಲಿ – ಆಂತರ ರಕ್ಷಣಾ ಶಾಸನದ ಮೇಲಿನ ಅಧ್ಯಕ್ಷರ ಆಜ್ಞೆ ವಿರುದ್ಧ ಪಾರ್ಲಿಮೆಂಟಿನ ಎರಡು ಸಭೆಗಳಲ್ಲೂ ಅನುಸರಿಸಬೇಕಾದ ಮಾರ್ಗ ನಿರ್ಧರಿಸಲು ವಿರೋಧ ಪಕ್ಷಗಳು ಸಭೆ ಸೇರಿವೆ.

★

ಉದ್ಯೋಗಗಳ ಸೃಷ್ಟಿ

ನವದೆಹಲಿ— ಸರಕಾರದ ಆರ್ಥ-ವ್ಯವಹಾರಿಯ ಉದ್ಯೋಗ ಕಾರ್ಯಕ್ರಮದಲ್ಲಿ 73-74 ರಲ್ಲಿ ರೂ 52 85 ಕೋಟಿ ಖರ್ಚಿನಲ್ಲಿ 334184 ಉದ್ಯೋಗಗಳು ಸೃಷ್ಟಿಸಲಾಗಿದೆಯೆಂದು ಪ್ರಕಟವಾಗಿದೆ.

ಹೋಗಲು ಈರೆ ಇತ್ತಕಡೆ – ರಾಜ್ಯದ ಕಾನೂನು ಮತ್ತು ಶಾಂತಿಪಾಲನೆ ಮಂತ್ರಿ ಶ್ರೀ ಡಿ. ಕೆ. ನಾಯ್ಕರ್‌ರವರು ಸಾಮೂಹಿಕ ಕೇಂದ್ರ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ರಾಷ್ಟ್ರದ ಉನ್ನತಿಗೆ ಎಲ್ಲಾ ಪ್ರಜೆಗಳೂ ಎಲ್ಲಾ ರಂಗಗಳಲ್ಲಿಯೂ ಮುಂದುವರಿಯಬೇಕೆಂದು ಹೇಳಿದರು; ಗ್ರಾಮಾಂತರ ಪ್ರದೇಶದ ಬಡಜನತೆಗಾಗಿ ಮನೆ ಕಟ್ಟಿಕೊಳ್ಳಲು 2೫ ಲಕ್ಷ ರೂ. ಯೋಜನೆಯೊಂದು ಶರ್ಮರವರ ಪರಿಶೀಲನೆಯಲ್ಲಿಟ್ಟ ಶೀಘ್ರದಲ್ಲಿಯೇ ಕಾರ್ಯರೂಪಕ್ಕೆ ಬರಲಿದೆ ಎಂದು ತಿಳಿಸಿದರು ; ಮೈಸೂರು ನಗರ ಸಭೆಯನ್ನು ಕಾರ್ಪೊರೇಷನ್ ಆಗಿ ಪರಿವರ್ತಿಸುವ ವಿಚಾರ ಸರಕಾರದ ತೀವ್ರ ಗಮನದಲ್ಲಿದ್ದು, ಅದರ ಸಂಬಂಧ ನಗರಸಭೆಯು ಜನಾಭಿಪ್ರಾಯವನ್ನು ಮುಂದಿನ ಜುಲೈ ತಿಂಗಳಲ್ಲಿ ಪಡೆಯುವುದಾಗಿ ಹೇಳಿದರು – ಪ್ರಾರಂಭದಲ್ಲಿ ಪ್ರಾರ್ಥನಾನಂತರ, ಮಾಜಿ ಪುರಸಭಾಧ್ಯಕ್ಷ ಶ್ರೀ ಕೆ ಲಿಂಗಯ್ಯನವರು ಸ್ವಾಗತಿಸಿದರು ; ಮುನಿಸಿಪಲ್ ಕಮಿಷನರ್ ಶ್ರೀ ಸ್ವಯಂಪ್ರಕಾಶ್‌ರವರು ವಂದನಾರ್ಪಣೆ ಮಾಡಿದರು.

★

ಅಭಿನಂದನಾ ಸಮಾರಂಭಗಳು

ಮಡಕೇರಿ ಮತ್ತು ಸುಂಟಿಕೊಪ್ಪಗಳಲ್ಲಿ, ವಾರ್ತಾ ಮತ್ತು ಯುವಜನ ಸೇವಾ ಸ್ಟೇಟ್ ಮಂತ್ರಿಗಳಾಗಿರುವ ಶ್ರೀ ಆರ್ ಗುಂಡೂರಾಯರನ್ನು ಅಭಿನಂದಿಸಲು ಸಮಾರಂಭಗಳು ನಡೆದವು.

ಪುಡ'ಲಾಂಡ್ 15 11 74 ರಿಂದ

ಅವೋಫು 2 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,

ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 15 11 74 ರಿಂದ

ಜುಮೊನ್ ಆನ್'ಮಾನ್

ಅಶೋಕ ಕಾಮಾರ್ ಸುನಿಲ್ ದತ್

ರೇಖ ಯೋಗಿತ ಬಾಲಿ ಅಭಿನಯಿಸಿರುವ

ಅಮೋಘ ಹಿಂದಿ ಚಿತ್ರ

ಸಂಗೀತ – ಕಿಶೋರ್ ಕುಮಾರ್

ದಿನ 3 ಪ್ರದರ್ಶನಗಳು

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

Fair Price Shop in Actual Practice

Help The Goralsahana

— Humanitarian Propaganda Monthly....

Protect the Cow

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmaprachaaranirata M S. Krishna Rao (Proprietor) at the Satyavadi Press, Chamarajapuram Mysore